
ಐಸಿಎಆರ್ ಜೆಎಸ್‌ಎಸ್
ಕೃಷಿ ವಿಜ್ಞಾನ ಕೇಂದ್ರ, ಸುತ್ತೂರು

# ದೇಸಿ ಹಸು ತಳಿಗಳು

ಲೇಖಕರು
ಡಾ. ಸತೀಶ್ ಎಂ.ಸಿ., ಶ್ರೀಮತಿ ಹೆಚ್. ವಿ. ದಿವ್ಯಾ, ಶ್ರೀಮತಿ ನೇತ್ರಾವತಿ ಎತ್ತಿನಮನಿ



## ದೇಸಿ ಹಸು ತಳಿಗಳು

ಭಾರತವು ವೈವಿಧ್ಯಮಯ ಮತ್ತು ವಿಶಿಷ್ಟ ಹಸು, ಎಮ್ಮೆ ತಳಿಗಳ ತವರೂರು. ಭಾರತೀಯರು ಅನಾದಿ ಕಾಲದಿಂದಲೂ, ಹಸುಗಳಿಗೆ ಪೂಜನೀಯ ಸ್ಥಾನ ನೀಡಿದ್ದಾರೆ. ದೇಸಿ ಹಸುಗಳಲ್ಲಿ ಮುಕ್ಕೋಟಿ ದೇವತೆಗಳು ನೆಲೆಸಿರುತ್ತಾರೆ ಎಂಬ ನಂಬಿಕೆಯಿದೆ. ಇದಕ್ಕೆ ಸಾಕ್ಷಿಯೆಂಬಂತೆ ದೇಸಿ ಹಸುಗಳ ಉತ್ಪನ್ನಗಳಲ್ಲಿ ಔಷಧೀಯ ಗುಣಗಳಿದ್ದು, ಅನೇಕ ಆಧುನಿಕ ಖಾಯಿಲೆಗಳಿಗೆ ಮದ್ದಾಗಿವೆ. ಆದರೆ, ಇತ್ತೀಚಿನ ದಿನಗಳಲ್ಲಿ ದೇಸಿ ಹಸುಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಈ ನಿಟ್ಟಿನಲ್ಲಿ ನಮ್ಮ ದೇಸಿ ಸಂಪತ್ತನ್ನು, ಸಂರಕ್ಷಿಸುವುದು ಮತ್ತು ಅಭಿವೃದ್ಧಿಪಡಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಕೆಲವು ಪ್ರಮುಖವಾದ ದೇಸಿ ಹಸುಗಳ ವಿವರ ಕೆಳಗೆ ನೀಡಲಾಗಿದೆ.

### ಗಿರ್



- ಇದು ಗುಜರಾತಿನ ಮೂಲದಾಗಿದ್ದು, ಮಹಾರಾಷ್ಟ್ರ ಮತ್ತು ರಾಜಸ್ಥಾನದಲ್ಲಿ ಹೆಚ್ಚಾಗಿ ಕಂಡುಬರುತ್ತದೆ.
- ಈ ತಳಿಯನ್ನು ಭದವಾರಿ, ದೇಸನ್, ಗುಜರಾತಿ, ಕತಿಯಾವಾರಿ, ಸಾರ್ತಿ ಮತ್ತು ಸುರತಿ ಎಂಬ ಹೆಸರಿನಿಂದಲೂ ಕರೆಯುತ್ತಾರೆ.
- ಇದರ ಚರ್ಮವು ಗಾಢ ಕೆಂಪು ಅಥವಾ ಚಾಕೋಲೇಟ್-ಕಂದು ಬಣ್ಣದಾಗಿದ್ದು, ಕೆಲವೊಮ್ಮೆ ಕಪ್ಪು ಅಥವಾ ಸಂಪೂರ್ಣವಾಗಿ ಕೆಂಪು ಬಣ್ಣದಲ್ಲಿರುತ್ತದೆ.
- ಕೊಂಬುಗಳು ವಿಶಿಷ್ಟವಾಗಿ ಬಾಗಿದ್ದು, 'ಅರ್ಧ ಚಂದ್ರ' ಆಕಾರದಲ್ಲಿ ಕಾಣುತ್ತವೆ.
- ಇದು ಪ್ರತಿ ಸೂಲಿಗೆ 1200-1800 ಲೀಟರ್ ಹಾಲಿನ ಇಳುವರಿಯನ್ನು ನೀಡುತ್ತದೆ.
- ಈ ತಳಿಯು ಅದರ ಸಹಿಷ್ಣುತೆ ಮತ್ತು ರೋಗ ನಿರೋಧಕ ಶಕ್ತಿಗೆ ಹೆಸರುವಾಸಿಯಾಗಿದೆ.


### ರೆಡ್ ಸಿಂಧಿ

- ಅವಿಭಜಿತ ಭಾರತದ ಕರಾಚಿ ಮತ್ತು ಹೈದರಾಬಾದ್ (ಪಾಕಿಸ್ತಾನ) ಪ್ರದೇಶದ ಮೂಲದಾಗಿದ್ದು, ಪಂಜಾಬ್ ಮತ್ತು ಹರಿಯಾಣ ಭಾಗಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.
- ಈ ತಳಿಯನ್ನು ಕೆಂಪು ಕರಾಚಿ ಮತ್ತು ಸಿಂಧಿ ಮತ್ತು ಮಹಾ ಎಂಬ ಹೆಸರಿನಿಂದಲೂ ಕರೆಯಲಾಗುತ್ತದೆ.
- ಇದರ ಚರ್ಮವು ಕೆಂಪು ಬಣ್ಣದಾಗಿದ್ದು, ಅಲ್ಲಲ್ಲಿ ಬಿಳಿಯ ರೇಖೆಗಳು ಕಂಡುಬರುತ್ತವೆ.
- ಇದು ಪ್ರತಿ ಸೂಲಿಗೆ 1250-1800 ಲೀಟರ್ ಹಾಲಿನ ಇಳುವರಿಯನ್ನು ನೀಡುತ್ತದೆ.



### ಸಾಹಿವಾಲ್

- ಇದು ಅವಿಭಜಿತ ಭಾರತದ ಮಾಂಟ್ಗೊಮೆರಿ ಪ್ರದೇಶದ್ದಾಗಿದ್ದು, ಪಂಜಾಬ್ ಮತ್ತು ಹರಿಯಾಣ ಭಾಗಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.
- ಇದನ್ನು ಲೋಲಾ (ಸಡಿಲ ಚರ್ಮ), ಲ್ಯಾಂಬಿ ಬಾರ್, ಮೊಂಟ್ಗೊಮೆರಿ, ಮುಲ್ಟಾನಿ, ಟೆಲಿ ಎಂಬ ಹೆಸರಿನಿಂದಲೂ ಕರೆಯುತ್ತಾರೆ.
- ಇದರ ಚರ್ಮವು ರೆಡ್ಡಿಷ್ ಅಥವಾ ತಿಳಿ ಕೆಂಪು ಬಣ್ಣದಾಗಿದ್ದು, ಅಲ್ಲಲ್ಲಿ ಚರ್ಮ ಬಿಳಿಯಾಗಿರುತ್ತದೆ.
- ಇದು ಪ್ರತಿ ಸೂಲಿಗೆ 1400-2500 ಲೀಟರ್ ಹಾಲಿನ ಇಳುವರಿಯನ್ನು ನೀಡುತ್ತದೆ.
- ಇದು ದಷ್ಟಪುಷ್ಟವಾದ ದೇಹವನ್ನು ಹೊಂದಿದ್ದು, ಚರ್ಮವು ಸಡಿಲವಾಗಿರುತ್ತದೆ.
- ಅತ್ಯುತ್ತಮ ದೇಸಿ ಡೈರಿ ತಳಿ.



## ಹಳ್ಳಿಕಾರ್



» ಇದು ಪ್ರಾಚೀನ ಕರ್ನಾಟಕದ ವಿಜಯನಗರ ಮೂಲದಾಗಿದ್ದು, ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

» ಇದರ ಚರ್ಮವು ಬೂದು ಅಥವಾ ಗಾಢ ಬೂದು ಬಣ್ಣದ್ದಾಗಿದೆ.

» ಉದ್ದವಾದ ಕೊಂಬುಗಳು, ಅಗಲವಾದ ಹಣೆ, ಬಲವಾದ ಕಾಲುಗಳು ಮತ್ತು ಸ್ನಾಯುಗಳು ಇದರ ದೇಹದ ಲಕ್ಷಣಗಳಾಗಿರುತ್ತವೆ.

» ಹಾಲಿನ ಇಳುವರಿ ಅಲ್ಪವಾಗಿರುವುದು.

» ವಿಶಿಷ್ಟ ದೇಹರಚನೆಯಿಂದಾಗಿ ಈ ತಳಿಯು ಬೇಸಾಯಕ್ಕೆ ಅತ್ಯಂತ ಹೆಸರುವಾಸಿಯಾಗಿದೆ.

## ಖಿಲಾರಿ



» ಇದರ ಮೂಲ ಮಹಾರಾಷ್ಟ್ರದ ಸೋಲಾಪುರ ಮತ್ತು ಸೀತಾಪುರ ಜಿಲ್ಲೆಗಳು.

» ಇದರ ಚರ್ಮವು ಬೂದುಬಿಳಿ ಬಣ್ಣವನ್ನು ಹೊಂದಿರುತ್ತದೆ.

» ಇದರ ಕೊಂಬುಗಳು ಉದ್ದವಾಗಿದ್ದು, ಮುಂದಕ್ಕೆ ಬಾಗಿರುತ್ತವೆ. ಕೊಂಬುಗಳು ಸಾಮಾನ್ಯವಾಗಿ ಕಪ್ಪು ಬಣ್ಣದ್ದಾಗಿದ್ದು, ಕೆಲವೊಮ್ಮೆ ಗುಲಾಬಿ ಬಣ್ಣ ಹೊಂದಿರುತ್ತವೆ.

» ಈ ತಳಿಯು ವೇಗ ಮತ್ತು ಬಲಕ್ಕೆ ಹೆಸರುವಾಸಿಯಾಗಿದೆ.

» ಇದು ಹಳ್ಳಿಕಾರ್ ತಳಿಯನ್ನು ಹೋಲುತ್ತದೆ.

## ದೇವಣಿ

» ಪಶ್ಚಿಮ ಆಂಧ್ರಪ್ರದೇಶ, ಮಹಾರಾಷ್ಟ್ರದ ಮರಾಠವಾಡ ಮತ್ತು ಉತ್ತರಕರ್ನಾಟಕದ ಭಾಗದಲ್ಲಿ ಕಂಡುಬರುತ್ತದೆ.

» ಈ ತಳಿಯನ್ನು ದೊಂಗರ್ಪಟ್ಟಿ, ದೊಂಗರಿ, ವನ್ನೆರ, ಬಾಲ್ಯಾಂಕ, ಶೆವೆರಾ ಎಂಬ ಹೆಸರಿನಿಂದಲೂ ಕರೆಯುತ್ತಾರೆ

» ದೇಹದ ಬಣ್ಣವು ಸಾಮಾನ್ಯವಾಗಿ ಕಪ್ಪು ಮತ್ತು ಬಿಳಿ ಬಣ್ಣವನ್ನುಹೋಲುತ್ತದೆ.

» ಇದರ ದೇಹವು ದಪ್ಪವಾದ ಸ್ನಾಯು ಮತ್ತು ಬಲವಾದ ಕಾಲುಗಳನ್ನು ಹೊಂದಿರುತ್ತದೆ.

» ಈ ತಳಿಗಳು ಕಠಿಣ ಬೇಸಾಯಕ್ಕೆ ಸೂಕ್ತವಾಗಿವೆ.



## ಓಂಗೋಲ್


» ಈ ತಳಿಯು ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ಓಂಗೋಲ್ ತಾಲ್ಲೂಕಿನ ಮೂಲದಾಗಿದೆ.

» ಇದನ್ನು ನೆಲ್ಲೂರ್ ಎಂಬ ಹೆಸರಿನಿಂದಲೂ ಕರೆಯಲಾಗುತ್ತದೆ.

» ಚರ್ಮವು ಬಿಳಿ ಅಥವಾ ಬೂದು ಬಣ್ಣದಿಂದ ಕೂಡಿರುತ್ತದೆ.

» ಇದರ ದೇಹವು ಬಲವಾದ ಸ್ನಾಯುಗಳನ್ನು ಹೊಂದಿದ್ದು, ಬೆನ್ನಿನ ದಿಬ್ಬವು ದಪ್ಪವಾಗಿ ಬೆಳೆದಿರುತ್ತದೆ.

» ಈ ತಳಿಯು ಭಾರವಾದ ಬೇಸಾಯಕ್ಕೆ ಸೂಕ್ತವಾಗಿದೆ.



## ಮಲೆನಾಡು ಗಿಡ್ಡ

» ಇದರ ಮೂಲ ಪಶ್ಚಿಮ ಘಟ್ಟದ ಮಲೆನಾಡು; ಹೆಚ್ಚಾಗಿ ಮಲೆನಾಡಿನ ಗುಡ್ಡಗಾಡಿನ ಪ್ರದೇಶದಲ್ಲಿ ಕಂಡುಬರುತ್ತದೆ.

» ಈ ತಳಿಯನ್ನು ಗಿಡ್ಡ, ಊರದನ ಮತ್ತು ವರ್ಷದನ ಎಂಬ ಹೆಸರಿನಿಂದಲೂ ಕರೆಯಾಲಾಗುತ್ತದೆ.

» ಅತಿ ಹೆಚ್ಚು ರೋಗ ನಿರೋಧಕ ಶಕ್ತಿ ಹೊಂದಿರುವ ಈ ತಳಿಯು ಕಡಿಮೆ ಆಹಾರ ತಿಂದು, ಕಡಿಮೆ ಖರ್ಚಿನಲ್ಲಿ ಹೆಚ್ಚು ಹಾಗೂ



» ಅತಿಯಾಗಿ ಬಾಗಿದ ಕೊಂಬುಗಳು ಈ ತಳಿಯ ಪ್ರಮುಖ ದೇಹ ಲಕ್ಷಣ.
» ಈ ತಳಿಯು ಹಾಲು ಮತ್ತು ಬೆಣ್ಣೆ ಉತ್ಪಾದನೆಗೆ ಅತ್ಯಂತ ಹೆಸರುವಾಸಿಯಾಗಿದೆ.



ಪೌಷ್ಟಿಕಾಂಶಯುಕ್ತ ಹಾಲನ್ನು ನೀಡುತ್ತದೆ
» ಇದರ ಹಾಲು ಮತ್ತು ಮೂತ್ರ ವಿಶಿಷ್ಟವಾದ ಔಷಧೀಯ ಗುಣಗಳನ್ನು ಹೊಂದಿದೆ.

## ಮುರ್ರಾ ಎಮ್ಮೆ

» ಇದರ ಮೂಲ ಪಂಜಾಬ್ ಮತ್ತು ಹರಿಯಾಣ.
» ಇದನ್ನು ದೆಹಲಿ, ಕುಂಡಿ ಮತ್ತು ಕಾಳಿ ಎಂಬ ಹೆಸರಿನಂದಲೂ ಕರೆಯುತ್ತಾರೆ.
» ದೇಹದ ಬಣ್ಣವು ಸಾಮಾನ್ಯವಾಗಿ ಕಪ್ಪಾಗಿರುತ್ತದೆ. ಬಾಲ, ಮುಖ ಮತ್ತು ಕಾಲಿನ ಮೇಲೆ ಬಿಳಿ ಬಣ್ಣದ ಗುರುತುಗಳಿರುತ್ತವೆ.
» ಹಾಲಿನ ಇಳುವರಿಯು ಒಂದು ಸೂಲಿಗೆ 1500-2500 ಲೀಟರ್.

